# ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ,ವಿಜಯಪುರ

## ಗ್ರಂಥಾಲಯ

ಕ್ರಸಂ:ಕ.ರಾ.ಅ.ಮ.ವಿ.ವಿ./ಗ್ರಂ ಸ.ಸ.ಸ./2019–20/ ದಿನಾಂಕ:

**ದಿನಾಂಕ 04-10-2019 ರಂದು ಬೆಳಿಗ್ಗೆ 11:00 ಗಂಟೆಗೆ ತೊರವಿ ಆವರಣದ ಸಿಂಡಿಕೇಟ್ ಸಭಾ ಭವನದಲ್ಲಿ ಜರುಗಿದ ಗ್ರಂಥಾಲಯ ಸಲಹಾ ಸಮಿತಿ ಸಭೆಯ ನಡವಳಿಗಳು**

ಸಭೆಗೆ ಹಾಜರಾದ ಸದಸ್ಯರು

1. ಪ್ರೊ. ಸಬಿಹಾ ಕುಲಪತಿಗಳು — ಸಭಾಧ್ಯಕ್ಷರು
2. ಪ್ರೊ. ಆರ್. ಸುನಂದಮ್ಮ. ಕುಲಸಚಿವರು — ಸದಸ್ಯರು
3. ಪ್ರೊ. ವಿಜಯಾ. ಬಿ. ಕೋರಿಶೆಟ್ಟಿ, ಆರ್ಥಿಕ ಅಧಿಕಾರಿಗಳು — ಸದಸ್ಯರು
4. ಪ್ರೊ. ಅಜೀಜ ಮಕಾಂದಾರ್ ಡೀನರು, ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯ — ಸದಸ್ಯರು
5. ಪ್ರೊ.ಕೆ.ಎಮ್.ಸಂಜೀವಕುಮಾರ ಡೀನರು, ವಾಣಿಜ್ಯ ನಿಕಾಯ — ಸದಸ್ಯರು
6. ಪ್ರೊ. ಬಿ.ಎಲ್.ಲಕ್ಕಣ್ಣವರ್ ಡೀನರು, ಶಿಕ್ಷಣ ನಿಕಾಯ — ಸದಸ್ಯರು
7. ಡಾ.ಯು.ಕೆ.ಕುಲಕರ್ಣಿ ನಿರ್ದೇಶಕರು, ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶನಾಲಯ ವಿದ್ಯಾವಿಷಯಕ ಪರಿಷತ್ ಸದಸ್ಯರು — ಸದಸ್ಯರು
8. ಡಾ. ಜ್ಯೋತಿ ಉಪಾಧ್ಯೆ ದೈಹಿಕ ಶಿಕ್ಷಣ ನಿರ್ದೇಶಕರು, — ಸದಸ್ಯರು
9. ಡಾ. ವಿಷ್ಣು. ಶಿಂದೆ. ಪ್ರಸಾರಂಗ ನಿರ್ದೇಶಕರು, — ಸದಸ್ಯರು
10. ಪ್ರೊ. ಪಿ.ಜಿ.ತಡಸದ ಗ್ರಂಥಪಾಲಕರು (ಪ್ರಭಾರ) ಹಾಗೂ ಕುಲಸಚಿವರು (ಮೌ) — ಸದಸ್ಯರು ಸಂಚಾಲಕರು

ಸಭೆಗೆ ಹಾಜರಾಗದ ಸದಸ್ಯರು

1. ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ ಧಾರವಾಡ ಸಿಂಡಿಕೇಟ್ ಸದಸ್ಯರು — ಸದಸ್ಯರು
2. ಶ್ರೀ ವಿವೇಕರಾವ.ವಿ.ಪಾಟೀಲ ಸನ್ಮಾನ್ಯ ವಿಧಾನ ಪರಿಷತ್ ಸದಸ್ಯರು ಹಾಗೂ ವಿದ್ಯಾವಿಷಯಕ ಪರಿಷತ್ ಸದಸ್ಯರು — ಸದಸ್ಯರು
3. ಪ್ರೊ. ಓಂಕಾರ ಕಾಕಡೆ, ಡೀನರು, ಸಮಾಜ ವಿಜ್ಞಾನ ನಿಕಾಯ — ಸದಸ್ಯರು
4. ಪ್ರೊ. ನಾಮದೇವ್ ಗೌಡ, ಡೀನರು, ಕಲಾ ನಿಕಾಯ — ಸದಸ್ಯರು

ದಿನಾಂಕ: 04-10-2019 ರಂದು ಬೆಳಿಗ್ಗೆ 11.00 ಗಂಟೆಗೆ ಜರುಗಿದ ಗ್ರಂಥಾಲಯ ಸಲಹಾ ಸಮಿತಿ ಸಭೆಯ ನಡವಳಿಗಳು.

ಗ್ರಂಥಪಾಲಕರು ಸಭೆಗೆ ಹಾಜರಾದ ಸದಸ್ಯರುಗಳಿಗೆ ಸ್ವಾಗತಕೋರಿದರು, ನಂತರ ಸಭೆ ಪ್ರಾರಂಭವಾಯಿತು.

ಐಟಂ ನಂ. 1) ದಿನಾಂಕ: 25-09-2018 ರಂದು ಜರುಗಿದ ಗ್ರಂಥಾಲಯ ಸಲಹಾ ಸಮಿತಿ ಸಭೆಯ ನಡವಳಿಗಳನ್ನು ದೃಢೀಕರಿಸುವುದು. (ಲಗತ್ತು-1)

ಗ್ರಂಥಾಲಯ ಸಲಹಾ ಸಮಿತಿ ಸಭೆಯ ತೀರ್ಮಾನ

ದೃಢೀಕರಿಸಲಾಯಿತು.

ಐಟಂ ನಂ. 2) ದಿನಾಂಕ: 25-09-2018 ರಂದು ಜರುಗಿದ ಗ್ರಂಥಾಲಯ ಸಲಹಾ ಸಮಿತಿ ಸಭೆಯಲ್ಲಿ ತೆಗೆದುಕೊಂಡ ನಿರ್ಣಯಗಳ ಮೇಲೆ ಜರುಗಿಸಲಾದ ಕ್ರಮಗಳ ಕುರಿತು. (ಲಗತ್ತು-2)

ಗ್ರಂಥಾಲಯ ಸಲಹಾ ಸಮಿತಿ ಸಭೆಯ ತೀರ್ಮಾನ

1) ಈಗಾಗಲೇ ಅರ್ಥಶಾಸ್ತ್ರ ಮತ್ತು ಸಮಾಜಶಾಸ್ತ್ರ ವಿಭಾಗಗಳಲ್ಲಿ ಗಣಕಯಂತ್ರ ಕೇಂದ್ರ ಕಾರ್ಯಾರಂಭ ಮಾಡಿರುವದರಿಂದ ಐಟಂ 5 ನ್ನು ಹಿಂಪಡೆಯಲಾಯಿತು.

2) ಐಟಂ ನಂ. 9ಕ್ಕೆ ಸಂಬಂಧಿಸಿದಂತೆ ಒಂದು **Proposal** ಸಲ್ಲಿಸುವಂತೆ ನಿರ್ಧರಿಸಲಾಯಿತು.

3) ಐಟಂ ನಂ. 11ಕ್ಕೆ **Women's Studies** ವಿಭಾಗದಿಂದ ಶಿಫಾರಸ್ಸು ಮಾಡಿದ **Classics** ಗ್ರಂಥಗಳನ್ನು ಅಂದಿನ ಸಭೆಯ ತೀರ್ಮಾನದಂತೆ ಜಾರಿಗೆ ತಂದಿದೆಯೇ ಎಂದು ಪರಿಶೀಲಿಸುವಂತೆ ಗ್ರಂಥಪಾಲಕರಿಗೆ ಸೂಚಿಸಲಾಯಿತು.

4) ಐಟಂ ನಂ. 16ಕ್ಕೆ ಈ ವರ್ಷದ ಅನುದಾನದಲ್ಲಿ ಪುಸ್ತಕ ಖರೀದಿಗೆ ಅವಕಾಶ ಕಲ್ಪಿಸಲಾಗಿದೆಯೇ ಎಂಬುದನ್ನು ಪರಿಶೀಲಿಸಿ ಕ್ರಮ ಜರುಗಿಸಲು ನಿರ್ಧರಿಸಲಾಯಿತು.

5) ಉಳಿದಂತೆ ಎಲ್ಲ ಕ್ರಮಗಳನ್ನು ಒಪ್ಪಲಾಯಿತು.

ಐಟಂ ನಂ. 3) ವಿಶ್ವವಿದ್ಯಾನಿಲಯದ Collection Development Policy ಪರಿಷ್ಕರಿಸುವದು. (ಲಗತ್ತು-3)

ಗ್ರಂಥಾಲಯ ಸಲಹಾ ಸಮಿತಿ ಸಭೆಯ ತೀರ್ಮಾನ

ಪುಸ್ತಕ ಸರಬರಾಜುದಾರರಿಂದ ಸಿಗದಿರುವ ಅಥವಾ ಹಳೆಯ ಅಥವಾ ತುರ್ತಾಗಿ ಬೇಕಾದ ಪುಸ್ತಕಗಳನ್ನು **amazon.com** ಹಾಗೂ ಇನ್ನಿತರ **Online** ಸೇವೆಗಳ ಮುಖಾಂತರ ಖರೀದಿ ಮಾಡಲು ಹಾಗೂ ಆ ಮೊತ್ತವನ್ನು **Advance** ಆಗಿ ನೀಡಲು ಒಪ್ಪಿಗೆ ನೀಡುವುದರ ಜೊತೆಗೆ **CDP** ಯನ್ನು ಅನುಮೋದಿಸಲಾಯಿತು.

ಐಟಂ ನಂ. 4) 2019-20ನೇ ಸಾಲಿಗಾಗಿ ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅಧ್ಯಯನ ವಿಭಾಗಗಳಿಗೆ ಗ್ರಂಥ ಖರೀದಿಗೆ ಅನುಮತಿ ನೀಡುವದು.

ಪ್ರಸ್ತಾವನೆ:2019-20 ನೇ ಸಾಲಿನ ವಿಶ್ವವಿದ್ಯಾನಿಲಯದ ಆಯವ್ಯಯದಲ್ಲಿ ಈ ಕೆಳಗಿನಂತೆ ಗ್ರಂಥ ಖರೀದಿಗಾಗಿ ಹಣ ಹಂಚಲಾಗಿದ್ದು ಗ್ರಂಥ ಖರೀದಿಗೆ ಅನುಮತಿಗಾಗಿ ಮಂಡಿಸಿದೆ.

| Sl. No | Departments | Amount |
|---|---|---|
| 1 | Kannada | 50,000/- |
| 2 | Hindi | 50,000/- |
| 3 | Urdu | 50,000/- |
| 4 | English | 50,000/- |
| 5 | Sociology | 50,000/- |
| 6 | Political Science | 50,000/- |
| 7 | Economics | 50,000/- |
| 8 | History | 50,000/- |
| 9 | Social Work | 50,000/- |
| 10 | Women's Studies | 50,000/- |
| 11 | Library and Information Science | 50,000/- |
| 12 | Journalism and Mass communication | 50,000/- |
| 13 | Physics | 50,000/- |
| 14 | Chemistry | 50,000/- |
| 15 | Mathematics | 50,000/- |
| 16 | Statics | 50,000/- |
| 17 | Botany | 50,000/- |
| 18 | Zoology | 50,000/- |
| 19 | Biotechnology | 50,000/- |
| 20 | Bioinformatics | 50,000/- |
| 21 | Food and Nutrition | 50,000/- |
| 22 | Commerce | 50,000/- |
| 23 | Management | 50,000/- |
| 24 | Education | 50,000/- |
| 25 | Physical Education | 50,000/- |
| 26 | Performing Arts (Music) | 50,000/- |
| 27 | Yoga | 50,000/- |
| 28 | Computer Science M Sc and MCA | 100000/- |

<u>ಗ್ರಂಥಾಲಯ ಸಲಹಾ ಸಮಿತಿ ಸಭೆಯ ತೀರ್ಮಾನ</u>

ಪರಿಷ್ಕೃತ **Collection Development Policy** ಯನ್ವಯ ಪುಸ್ತಕ ಖರೀದಿಗೆ ಅನುಮೋದನೆ ನೀಡಲಾಯಿತು.

ಐಟಂ ನಂ. 5) ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ ಸ್ನಾತಕೋತ್ತರ ಕೇಂದ್ರ ಮಂಡ್ಯ, ಸಿಂಧನೂರ, ಮತ್ತು ಉಡುತಡಿಗೆ ಗ್ರಂಥಗಳನ್ನು ಖರೀದಿಸುವ ಕುರಿತು.

ಪ್ರಸ್ತಾವನೆ: ವಿಶ್ವವಿದ್ಯಾನಿಯದ 2019–20 ನೇ ಸಾಲಿನ ಆಯವಯ್ಯದಲ್ಲಿ ಈ ಕೆಳಗಿನಂತೆ ಗ್ರಂಥ ಖರೀದಿಗಾಗಿ ಹಣ ಹಂಚಿಕೆ ಮಾಡಲಾಗಿದೆ.

| | | |
|---|---|---|
| 01 | Extension Centre Mandya | 50,000/- |
| 02 | P.G. Center Shindhanur | 50,000/- |
| 03 | P.G. Center Udutadi | - |

ಹಂಚಿಕೆಯಾದ ಹಣದಲ್ಲಿ ಗ್ರಂಥ ಖರೀದಿಗೆ ಅನುಮತಿ ನೀಡುವದು ಹಾಗೂ ಉಡುತಡಿ ಸ್ನಾತಕೋತ್ತರ ಕೇಂದ್ರಕ್ಕೆ ಹಣ ಹಂಚಿಕೆ ಮಾಡುವದು.

<u>ಗ್ರಂಥಾಲಯ ಸಲಹಾ ಸಮಿತಿ ಸಭೆಯ ತೀರ್ಮಾನ</u>

ಗ್ರಂಥಾಲಯಕ್ಕೆ ಮೀಸಲಾಗಿರಿಸಿದ ರೂ.**8.00** ಲಕ್ಷದಲ್ಲಿ ರೂ.**50000/-**ನ್ನು ಉಡುತಡಿ ಕೇಂದ್ರದ ಗ್ರಂಥ ಖರೀದಿಗೆ ಮೀಸಲಾಗಿರಿಸಿದೆ ಹಾಗೂ ಎಲ್ಲ ಕೇಂದ್ರಗಳ ಗ್ರಂಥ ಖರೀದಿಗೆ ಅನುಮತಿ ನೀಡಿದೆ

ಐಟಂ ನಂ. 6) : ವಿಶ್ವವಿದ್ಯಾನಿಲಯದ ಆಯವ್ಯಯದ ಶೀರ್ಷಿಕೆ 1567 ರಲ್ಲಿ ಪುಸ್ತಕಗಳ ಖರಿದೀಗಾಗಿ 2019–20 ನೇ ಸಾಲಿನಲ್ಲಿ ಗ್ರಂಥಾಲಯಕ್ಕಾಗಿ ರೂ.8.00 ಲಕ್ಷ ಮೀಸಲಾಗಿಟ್ಟಿದೆ, ಇದನ್ನು ಮಾನ್ಯ ಕುಲಪತಿಗಳ ಅನುಮೋದನೆ ಪಡೆದು ಗ್ರಂಥ ಖರೀದಿ ಮಾಡಲು ಅನುಮತಿಗೆ ಮಂಡಿಸಿದೆ.

ಗ್ರಂಥಾಲಯ ಸಲಹಾ ಸಮಿತಿ ಸಭೆಯ ತೀರ್ಮಾನ

ಉಡುತಡಿ ಕೇಂದ್ರಕ್ಕೆ ಹಂಚಿಕೆಯಾದ ನಂತರ ಉಳಿದ ರೂ.7.5 ಲಕ್ಷ ಹಣವನ್ನು ವಿಭಾಗಗಳ ಅವಶ್ಯಕತೆಗನುಗುಣವಾಗಿ ಹಾಗೂ ಗ್ರಂಥಪಾಲಕರ ವಿವೇಚನೆಗೆ ಅನುಗುಣವಾಗಿ ಗ್ರಂಥ ಖರೀದಿಗೆ ಅನುಮತಿ ನೀಡಲಾಗಿದೆ.

ಐಟಂ ನಂ. 7) ಗ್ರಂಥಪಾಲಕರ ಖಾತೆ ಸಂಖ್ಯೆಯಲ್ಲಿ (08542200002040) ವಿವಿಧ ಸೇವೆಗಳಿಂದ ಸಂಗ್ರಹಿಸಿದ ರೂ.2,00,000/–(ಎರಡು ಲಕ್ಷ ರೂಪಾಯಿ ಮಾತ್ರ)ಗಳನ್ನು ಆರ್ಥಿಕ ಅಧಿಕಾರಿಗಳು, ಕರಾಅಮವಿವಿ, ವಿಜಯಪುರ ಇವರ ಹೆಸರಿಗೆ ವರ್ಗಾಯಿಸುವ ಕುರಿತು.

ಗ್ರಂಥಾಲಯ ಸಲಹಾ ಸಮಿತಿ ಸಭೆಯ ತೀರ್ಮಾನ

ಹಣ ವರ್ಗಾಯಿಸುವ ಬದಲು ಗ್ರಂಥಾಲಯದಲ್ಲಿ ಡಿಜಿಟಲ್ ಲೈಬ್ರರಿ ಸ್ಥಾಪನೆಗಾಗಿ **Keonics** ಮುಖಾಂತರ **Hardware** ಖರೀದಿಸಲು ಅನುಮತಿಸಿದೆ.

ಐಟಂ ನಂ.8) 2019-20 ನೇ ಸಾಲಿನಲ್ಲಿ ಪ್ರಥಮ ವರ್ಷ ಪ್ರವೇಶಾತಿ ಪಡೆದಿರುವ ವಿದ್ಯಾರ್ಥಿನಿಯರಿಗೆ ಹಾಗು ಶಿಕ್ಷಕರು/ಸಂಶೋಧನಾ ವಿದ್ಯಾರ್ಥಿನಿಯರಿಗೆ Identity Card ಮುದ್ರಿಸುವ ಕುರಿತು.

ಪ್ರಸ್ತಾವನೆ: ಪ್ರತಿ ವರ್ಷವೂ ಹೊಸದಾಗಿ ಪ್ರವೇಶಾತಿ ಪಡೆದಿರುವ ಸ್ನಾತಕೋತ್ತರ ವಿದ್ಯಾರ್ಥಿನಿಯರಿಗೆ ಹಾಗೂ ಸಂಶೋಧನಾ ವಿದ್ಯಾರ್ಥಿನಿಯರಿಗೆ ಗ್ರಂಥಾಲಯದಿಂದ ID Card ನೀಡಲಾಗುತ್ತದೆ. ಇದರ ಜೊತೆಗೆ ID Card ಕಳೆದುಕೊಂಡ ವಿದ್ಯಾರ್ಥಿನಿಯರಿಗೂ ID Card ನೀಡಲಾಗುವದು. ಇದಕ್ಕಾಗಿ ಪ್ರತಿಯೊಬ್ಬರಿಂದ ರೂ. 60/- ಮಾತ್ರ ಪಡೆಯಲಾಗುತ್ತದೆ. ಈ ದರ ಈ ಶೈಕ್ಷಣಿಕ ವರ್ಷಕ್ಕೆ ಅನ್ವಯಿಸುತ್ತದೆ. ಹಾಗೂ ಒಟ್ಟು ರೂ. 1. ಲಕ್ಷ ಮೀರುವದಿಲ್ಲ ಕಾರಣ Quotation ಮೂಲಕ ದರ ಪಟ್ಟಿ ಆಹ್ವಾನಿಸಿ ID Card ಮುದ್ರಿಸಿ ನೀಡಲು ಅನುಮತಿಗಾಗಿ ಮಂಡಿಸಿದೆ.

ಮುಂದುವರೆದು ವಿಶ್ವವಿದ್ಯಾನಿಲಯದ ಹೆಸರು ಬದಲಾಗಿರುವ ಹಿನ್ನಲೆಯಲ್ಲಿ ಎಲ್ಲ ಶಿಕ್ಷಕರಿಗೆ ವಿಶ್ವವಿದ್ಯಾನಿಲಯವೇ ಖರ್ಚು ಭರಿಸಿ ID Card ನೀಡಲು ಅನುಮತಿಗಾಗಿ ಮಂಡಿಸಿದೆ.

ಗ್ರಂಥಾಲಯ ಸಲಹಾ ಸಮಿತಿ ಸಭೆಯ ತೀರ್ಮಾನ

**ID Card** ನೀಡಲು ಅನುಮತಿಸಿದೆ. ಶಿಕ್ಷಕರಿಂದ **ID Card**ಗಾಗಿ **Rs.100/-** ಪಡೆಯಲು ಅನುಮೋದನೆ ನೀಡಲಾಗಿದೆ.

ಐಟಂ ನಂ. 9) Subscription of New Journals / Renewal of Current Periodical/ Magazines/News Papers.

ಪ್ರಸ್ತಾವನೆ : ವಿಭಾಗಗಳ ಮುಖ್ಯಸ್ಥರ ಸ್ಪಷ್ಟ ಶಿಫಾರಸ್ಸಿನ ಮೇರೆಗೆ ನಿಯತಕಾಲಿಕೆಗಳ ನವೀಕರಣ ಮತ್ತು ಹೊಸ ನಿಯತಕಾಲಿಕೆಗಳ ಖರೀದಿಸಲು ಅನುಮತಿ ನೀಡುವ ಕುರಿತು.

ಗ್ರಂಥಾಲಯ ಸಲಹಾ ಸಮಿತಿ ಸಭೆಯ ತೀರ್ಮಾನ

ಅನುಮೋದನೆ ನೀಡಲಾಯಿತು.

1) ಚಂದಾದಾರರಾಗುವಾಗ ಸಾಧ್ಯವಿದ್ದಡೆ 3 ವರ್ಷಕ್ಕೆ ಚಂದಾದಾರರಾಗಲು ಅನುಮತಿಸಿದೆ.
2) ವೃತ್ತಿಪರ ಸಂಘ/ಸಂಸ್ಥೆಗಳು ನಿಯತಕಾಲಿಕೆಗಳನ್ನು ಹೊರತರುತ್ತಿದ್ದಲ್ಲಿ ಅಗತ್ಯ ಹಾಗೂ ಪ್ರಮುಖ ಸಂಘ ಸಂಸ್ಥೆಗಳ ಅಜೀವ ಸದಸ್ಯತ್ವ ಪಡೆದು ನಿಯತಕಾಲಿಕೆಗಳನ್ನು ತರಿಸಲು ನಿರ್ಧರಿಸಲಾಯಿತು.

ಐಟಂ ನಂ. 10) Smart Card Machine ಖರೀದಿಸುವ ಕುರಿತು.

ಪ್ರಸ್ತಾವನೆ : ವಿಶ್ವವಿದ್ಯಾನಿಲಯ ಗ್ರಂಥಾಲಯದಲ್ಲಿ ಈಗಾಗಲೇ Koha Software ಅಳವಡಿಸಲಾಗಿದ್ದು ಅದರಲ್ಲಿ ID Card ಪ್ರಿಂಟ್ ಮಾಡಲು ಅವಕಾಶ ಕಲ್ಪಿಸಲಾಗಿದೆ. ಇದಕ್ಕೆ Smart Card Machine ಖರೀದಿಸುವದು ಅವಶ್ಯವಾಗಿದೆ, ಅಂದಾಜು ರೂ. 25000/- ವೆಚ್ಚವಾಗಬಹುದಾಗಿದ್ದು ಅದನ್ನು ಖರೀದಿಸಲು ಅನುಮತಿಗೆ ಮಂಡಿಸಿದೆ.

ಗ್ರಂಥಾಲಯ ಸಲಹಾ ಸಮಿತಿ ಸಭೆಯ ತೀರ್ಮಾನ

ಅನುಮೋದನೆ ನೀಡಿದೆ.

ಐಟಂ ನಂ. 11) ಅಧ್ಯಕ್ಷರ ಅಪ್ಪಣೆಯ ಮೇರೆಗೆ ಇತರೇ ವಿಷಯಗಳು.

| | | |
|---|---|---|
| ಗ್ರಂಥಪಾಲಕರು | ಕುಲಸಚಿವರು | ಕುಲಪತಿಗಳು |
| ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ ವಿಜಯಪುರ | ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ ವಿಜಯಪುರ | ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ ವಿಜಯಪುರ |